M.V.C .NO. 1069/2020

PW–1

dated: 30–04–2026.

ಸಾಕ್ಷಿಯನ್ನು ಈ ದಿನ ದಿನಾಂಕ 30–04–2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟೀ ಸವಾಲುಃ 2 ನೇ ಎದುರುದಾರ ಪರವಾಗಿ ಶ್ರೀ ಯು ಸಿ ಎಚ್ ವಕೀಲರಿಂದಃ.

ಪ್ರಸ್ತುತ ಪ್ರಕರಣದಲ್ಲಿ ನಾನು ಹಾಜರುಪಡಿಸಿದ ಕಾಗದ ಪತ್ರಗಳನ್ನು ನೊಡಿ ತಿಳಿದುಕೊಂಡಿರುತ್ತೇನೆ. ಅಪಘಾತ ಕುರಿತು ಪೊಲಿಸ ದೂರು ನಾವೇ ಕೊಟ್ಟಿರುತ್ತೇವೆ. ಪೊಲಿಸ ದೂರು ಕೊಟ್ಟ ದಿನಾಂಕ 12–12–2018 ಇರುತ್ತದೆ. ಪೊಲಿಸ ದೂರನ್ನು ನಾನು ಹೇಳಿದಂತೆ ವಕೀಲರು ಬರೆದಿರುತ್ತಾರೆ. ಸದರಿ ದೂರು ಎಲ್ಲಿ ಕೊಟ್ಟಿದ್ದೀರಾ ಎಂದರೆ ವಕೀಲರ ಕಡೆ ಕೊಟ್ಟಿರುತೇನೆ. ನಾನು ಅಪಘಾತ ಕುರಿತು ಖೊಟ್ಟಿ ಪೊಲಿಸ ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಅಪಘಾತದಲ್ಲಿ ಆದ ಗಾಯಕ್ಕಾಗಿ ಡಾ. ಮುದುಕಗೌಡರ ಹತ್ತಿರ ಉಪಚಾರ ಪಡೆದಿರುತ್ತೇನೆ. 1 ವಾರದವರೆಗೆ ಸದರಿಯವರ ಆಸ್ಪತ್ರೆ ಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ. ವೈದ್ಯರು ನನ್ನ ಕೈಗೆ ಆಪರೇಶನ ಮಾಡಿರುತ್ತಾರೆ. ಈ ಮಾತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ವಾರದ ವರೆ ೆಗ ಆಸ್ಪತ್ರೆ ಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ಯಾವುದೇ ಅಪಘಾತ ಜರುಗಿರುವುದ್ಲಿ ಮತ್ತು ಅದರಲ್ಲಿ ನನಗೆ ಯಾವುದೇ ಪೆಟ್ಟುಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ನನ್ನ ಉಪಚಾರ ಖರ್ಮ ರೂ 1 ಲಕ್ಷ ತಗುಲಿರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ರಾಡ ತೆಗೆಯಲು ರೂ. 50 ಸಾವಿರ ವೈದ್ಯಕೀಯ ಖರ್ಚು ತುಗುಲುತ್ತದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ನನಗೆ

M.V.C .NO. 1069/2020
PW-1
dated: 30-04-2026.

ಯಾವುದೇ ಶಸ್ತ್ರ ಕ್ರಿಯೆ ಆಗಿರುವುದಿಲ್ಲ ಹೀಗಾಗಿ ರಾಡ ತೆಗೆಯುವ ಪ್ರಶ್ನೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ ರೂ 20 ಸಾವಿರ ಆದಾಯ ಇತ್ತು ಎನುನವುದಕಕ್ಕೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ವಯಸ್ಸು 77 ಇತ್ತು ಎನ್ನುವುದಕ್ಕೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ವಯಸ್ಸಿನ ಕುರಿತು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಕೃಷಿ ಮತ್ತು ಕಾಳಿನ ವ್ಯಾಪಾರ ಮಾಡುತ್ತಿದ್ದೇ ಎನ್ನುವುದಕ್ಕೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗ ನ್ಯೂನತೆ ಉಂಟಾಗಿರುವುದಿಲ್ಲ , ಪರಿಹಾರ ಹಣಕ್ಕಾಗಿ ವೈಧ್ಯರಿಂದ ಖೊಟ್ಟೆ ಅಂಗ ನ್ಯೂನತೆ ಪ್ರಮಾಣ ಪತ್ರ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ವಾಹನದಿಂದ ಯಾವುದೇ ಅಪಘಾತ ಜರುಗಿಲ್ಲ ಹೀಗಾಗಿ 2 ನೇ ಎದುರುದಾರ ಪರಿಹಾರ ಹಣ ಕೊಡಲು ಬಾಧ್ಯಸ್ತರು ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಎದುರುದಾರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಆದ್ದರಿಂದ 1 ನೇ ಎದುರುದಾರರ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಬೈಲಹೊಂಗಲ.